# ಬೆಳ್ಳಿ 'ಕಿರಣ'ದ ಬೆಂಕಿ

ಗಂಡನ ಜತೆಗೆ ಊಟ ಮಾಡುತ್ತಾ ಹೆಣ್ಣುಮಗಳೊಬ್ಬಳು, 'ಈ ದೇಶದಲ್ಲಿ ದಿನ ಬೆಳಗಾದರೆ ಕೋಮು ಗಲಭೆ, ಹಿಂಸೆಗಳದ್ದೇ ಸುದ್ದಿ. ಇಲ್ಲಿ ಮಗ ಬೆಳೆಯುವುದಾದರೂ ಹೇಗೆ? ನಾವು ದೇಶ ಬಿಟ್ಟು ವಿದೇಶಕ್ಕೆ ಹೋಗಿ ನೆಲೆಸಬೇಕಾಗಬಹುದೇನೋ..?' ಎಂದು ಹೇಳಿದ್ದೇ ಇಡೀ ದೇಶ ಬೆಚ್ಚಿಬಿದ್ದಿದೆ. ದೊಡ್ಡ ಗುಂಪೊಂದು, 'ಇದು ದೇಶದ್ರೋಹ' ಎಂದು ಕೂಗಾಡುತ್ತಿದೆ. ಇನ್ನೊಂದು ಗುಂಪು, 'ಅಯ್ಯೋ ಪಾಪ ಹೆಣ್ಣುಮಗಳು! ನಿಜಕ್ಕೂ ದೇಶದಲ್ಲಿ ಅಸಹಿಷ್ಣುತೆ ಮೇರೆ ಮೀರಿದೆ' ಎಂದು ಬೆಂಬಲಕ್ಕೆ ನಿಂತಿದೆ. ಖುದ್ದಾಗಿ ಪಾರ್ಲಿಮೆಂಟಿನಲ್ಲಿ ಸಂಸತ್ ಸದಸ್ಯರು ಸೆಕ್ಯುಲರಿಸಂ ಬಗ್ಗೆ ದಿನಗಟ್ಟಳೆ ಚರ್ಚೆ ನಡೆಸಿದ್ದಾರೆ. ದೇಶವಿಡೀ ವಾಗ್ವಾದಕ್ಕೆ ಕಾರಣಳಾದ ಆಕೆ ಮಾತ್ರ ತುಟಿಪಿಟಕ್ ಎಂದಿಲ್ಲ. ಆಕೆ ಕಿರಣ್ ರಾವ್. ಬಾಲಿವುಡ್‌ನ ಗಂಭೀರ ಹಾಗೂ ಜನಪ್ರಿಯ ನಟ ಅಮೀರ್‌ಖಾನ್‌ನ ಹೆಂಡತಿ.

ಕಿರಣ್‌ರಾವ್ ಹುಟ್ಟಿದ್ದು ಬೆಂಗಳೂರಿನಲ್ಲಿ. ಅಜ್ಜ ರಾಮೇಶ್ವರರಾವ್ ತೆಲಂಗಾಣದ ವಾಣಪರ್ಥಿಯ ಮಹಾರಾಜ. ಹೆತ್ತವರ ಜತೆ (ಬರ್ತ್‌ಡೇ 8-11-1973) ಬಾಲ್ಯ ಕಳೆದದ್ದು ಕೋಲ್ಕತ್ತಾದಲ್ಲಿ. ಕೆಲವು ವರ್ಷಗಳ ಬಳಿಕ ಕುಟುಂಬ ಮುಂಬೈಗೆ ವಲಸೆ ಹೋಯಿತು. 16ರ ಹರೆಯದಲ್ಲೇ ದುಡಿಯತೊಡಗಿದ ಕಿರಣ್, ಹರೆಯವನ್ನು ಲೇಡೀಸ್ ಹಾಸ್ಟೆಲ್‌ನಲ್ಲಿ ಕಳೆದಳು. ಮುಂಬೈಯ ಸೋಫಿಯಾ ಕಾಲೇಜಿನಲ್ಲಿ ಎಕನಾಮಿಕ್ಸ್ ಮೇಜರ್ ಪದವಿ. ಚಿತ್ರಕಲೆ ಕಲಿಯುವ ಪ್ರಯತ್ನಕ್ಕೆ ಎರಡು ತಿಂಗಳಲ್ಲೇ ಎಳ್ಳುನೀರು. ಅಲ್ಲಿಂದ ಮಾಸ್ ಕಮ್ಯುನಿಕೇಷನ್ಸ್ ಎಂಎ ಮಾಡಿದ್ದು ದೆಹಲಿಯ ಜಾಮಿಯಾ ಮಿಲ್ಲಿಯಾದಲ್ಲಿ. ಇದೆಲ್ಲದರ ನಡುವೆ ಸಂಗೀತದ ಹುಚ್ಚು. 20 ವರ್ಷಗಳ ಕಾಲ ನಿರಂತರ ಪಿಯಾನೊ ನುಡಿಸಿದಳು.



ಕಿರಣ್‌ಗೆ ಬಾಲ್ಯದಲ್ಲಿ ಸಿನಿಮಾ ಹುಚ್ಚಿರಲಿಲ್ಲ. ಮುಂಬೈಯಲ್ಲಿ ಬಾಲಿವುಡ್‌ನ ಅಷ್ಟೂ ಕಮರ್ಷಿಯಲ್ ಸಿನಿಮಾಗಳನ್ನು ನೋಡಿದಳು. ಅಮೀರ್ ಅಭಿನಯದ 'ದಿಲ್ ಚಾಹ್ತಾ ಹೈ' ಸಿನಿಮಾದಲ್ಲಿ ಐದೇ ನಿಮಿಷದ ಪುಟ್ಟ ಪಾತ್ರವೊಂದರಲ್ಲಿ ನಟಿಸಿದ್ದು ಯಾರಿಗೂ ಗೊತ್ತಾಗಲಿಲ್ಲ! ಆಕೆಗೆ ಮೊದಲು ಸಹಾಯಕ ನಿರ್ದೇಶಕಿಯಾಗಿ ಕೆಲಸ ಸಿಕ್ಕಿದ್ದು ಅಶುತೋಷ್ ಗೋವಾರಿಕರ್‌ನ 'ಲಗಾನ್' ಸಿನಿಮಾದಲ್ಲಿ. ಅದೇ ವರ್ಷ (2001) ಮೀರಾ ನಾಯರ್‌ರ 'ಮಾನ್ಸೂನ್ ವೆಡಿಂಗ್'ನಲ್ಲಿ ಕೆಲಸ. ಮಾಧವನ್ ಅಭಿನಯದ 'ಸಾಥಿಯಾ' ಮತ್ತು ಶಾರೂಕ್ ಅಭಿನಯದ 'ಸ್ವದೇಶ್' ಚಿತ್ರದಲ್ಲೂ ಸಹನಿರ್ದೇಶಕಿ.

ಈ ಮಧ್ಯೆ 2002ರಲ್ಲಿ ಅಮೀರ್‌ಖಾನ್ ಪತ್ನಿ ರೀನಾಗೆ ಡೈವೋರ್ಸ್ ಕೊಟ್ಟಿದ್ದ. ಆಗೀಗ ಕೆಲಸದ ವೇಳೆ ಅಮೀರ್‌ನನ್ನು ನೋಡುತ್ತಿದ್ದ ತರುಣಿ ಆತನತ್ತ ಪ್ರೇಮ ಬೆಳೆಸಿಕೊಂಡಳು. 2-3 ವರ್ಷ ಹೀಗೆಯೇ ಕಳೆಯಿತು. 'ಹೆಂಡತಿ ಬಿಟ್ಟ ಗಂಡಸಿಗೆ ನಾನು ಗರ್ಲ್‌ಫ್ರೆಂಡ್ ಆಗಲು ಒಪ್ಪಿಕೊಂಡಿದ್ದೆ. ಅದೊಂದು ವಿಚಿತ್ರ ಸನ್ನಿವೇಶ. ಹಾಗೆ ಹುಡುಗಿಯೊಬ್ಬಳೊಂದಿಗೆ ಓಡಾಡುವ ಗಂಡಸಿನ ಬಗ್ಗೆ ಸಮಾಜಕ್ಕೆ ಒಂದು ರೀತಿಯ ಅಭಿಮಾನ ಇರುತ್ತದೆ. ಆದರೆ ಮದುವೆ ಇಲ್ಲದೆ ಹಾಗೆ ಓಡಾಡುವ ಹೆಣ್ಣನ್ನು ಸಮಾಜ ನೋಡುವ ಕ್ರಮ ಬೇರೆಯೇ. ಗರ್ಲ್‌ಫ್ರೆಂಡ್‌ಅನ್ನು ಎಂದಿದ್ದರೂ ಕೈಬಿಡಬಹುದಲ್ಲ? ಆದರೆ ನಮ್ಮ ಪ್ರೇಮ ಗಟ್ಟಿಯಾಯಿತು. 2005ರಲ್ಲಿ ಮದುವೆಯೂ ಆಯಿತು. ಮಹಾತಾರೆ ಒಬ್ಬನನ್ನು ಮದುವೆ ಆಗಬೇಕು ಎಂದೇನೂ ನಾನು ಬಯಸಿರಲಿಲ್ಲ. ಮದುವೆಗೆ ಮುಂಚೆಯೂ ಅಮೀರ್ ನನ್ನನ್ನು ಜೀವನಸಂಗಾತಿಯಂತೆಯೇ ನೋಡಿಕೊಂಡಿದ್ದ. ತುಂಬ ಗೌರವ ಕೊಡುತ್ತಿದ್ದ..'- ಇದು ಮದುವೆಯ ಬಳಿಕ ಕಿರಣ್ ಪತ್ರಿಕೆಯೊಂದಕ್ಕೆ ನೀಡಿದ ಸಂದರ್ಶನದ ಸಾಲುಗಳು.

ಕಿರಣ್‌ಗೆ ದೇವರಲ್ಲಿ ನಂಬಿಕೆಯಿಲ್ಲ. ತಂದೆ-ತಾಯಿ ಸಂಪ್ರದಾಯಸ್ಥ ಹಿಂದೂಗಳಾಗಿದ್ದರೂ, ಮನೆಯಲ್ಲಿ ಆಚರಣೆಯ ನಿರ್ಬಂಧ ಇರಲಿಲ್ಲ. 'ಹಾಗೆಂದು ಧರ್ಮ ಜನರಿಗೆ ನೆಮ್ಮದಿ, ಭದ್ರತೆ, ತನ್ನದೆನ್ನುವ ಭಾವ ಮತ್ತು ಸಾಮುದಾಯಿಕ ಪ್ರಜ್ಞೆ ನೀಡುವುದು ನನಗೆ ಗೊತ್ತಿತ್ತು. ಆದರೆ ನಾನು ತಾರುಣ್ಯದಿಂದಲೇ ಧರ್ಮನಿರಪೇಕ್ಷಳಾಗಿದ್ದೆ. ಪೂಜೆ, ಆಚರಣೆಗಳಲ್ಲಿ ನಂಬಿಕೆ ಇರಲಿಲ್ಲ' ಎನ್ನುವುದೂ ಆಕೆಯದ್ದೇ ಮಾತು.

ಬಹುಶಃ ಕಿರಣ್ ಒಬ್ಬ ಸಾಮಾನ್ಯ ಗೃಹಿಣಿಯಾಗಿ 'ದೇಶ ತೊರೆಯಬೇಕಾಗುತ್ತದೋ ಏನೋ' ಎಂಬ ಮಾತು ಹೇಳಿದ್ದರೆ ದೊಡ್ಡ ವಿವಾದ ಆಗುತ್ತಿರಲಿಲ್ಲ. ಆದರೆ ಆಕೆ ಅಮೀರ್‌ಖಾನ್ ಪತ್ನಿ. ಈ ದೇಶ ಆತನಿಗೆ ಹಣ, ಕೀರ್ತಿ, ಅಂತಸ್ತು, ಪ್ರೀತಿ ಎಲ್ಲವನ್ನೂ ಕೊಟ್ಟಿದೆ. ಹಾಗಿರುವಾಗ ಆಕೆ ಹೀಗೆ ಹೇಳಬಹುದೆ? ಅದರೂ ಒಬ್ಬ ಮುಸ್ಲಿಂ ಧರ್ಮಕ್ಕೆ ಸೇರಿದ ನಟನ ಹೆಂಡತಿಯಾಗಿ!?

2005ರಲ್ಲಿ ಕಿರಣ್ ತನ್ನ ಗಂಡನ ಮುಂದೆ ಮುಂಬೈಯ ಕಥೆಯೊಂದನ್ನು ಹೇಳಿದ್ದಳು. ಆತ ಮೆಚ್ಚಿ ಸಿನಿಮಾ ಮಾಡು ಎಂದ. ಮೂರು ವರ್ಷ ಕುಳಿತು ಚಿತ್ರಕಥೆ ಬರೆದಳು. 2011 ರಲ್ಲಿ 'ಧೋಬಿ ಘಾಟ್' ನಿರ್ದೇಶಿಸಿದಳು. ವಿಮರ್ಶಕರ ಮೆಚ್ಚುಗೆ ಗಳಿಸಿದಳು.

ಮೊದಲ ಮಗುವಿನ ಗರ್ಭಪಾತವಾದಾಗ ಅಮೀರ್ ಹೆಂಡತಿಯನ್ನು ಚೆನ್ನಾಗಿ ನೋಡಿಕೊಂಡ. ವರ್ಷದ ಬಳಿಕ ಎರಡನೆಯದ್ದು ಬಾಡಿಗೆ ತಾಯ್ತನ. ಮಗನಿಗೆ ಸ್ವಾತಂತ್ರ್ಯ ಹೋರಾಟಗಾರ ಅಬುಲ್‌ಕಲಾಂ ಆಜಾದ್ ನೆನಪಿಗೆ, ಆಜಾದ್‌ರಾವ್ ಖಾನ್ ಎಂಬ ಹೆಸರಿಟ್ಟರು. 'ಆತ ನಾಳೆ ಯಾವುದಾದರೂ ಧರ್ಮವನ್ನು ಅನುಸರಿಸಿದರೆ ಏನು ಮಾಡುತ್ತೀ?' ಎಂದು ಪತ್ರಕರ್ತರು ಕೇಳಿದಾಗ, 'ಅದು ಆತನಿಷ್ಟ' ಎಂದಿದ್ದಳು ಕಿರಣ್.

ಎರಡನೇ ಸಿನಿಮಾದ ಲೆಕ್ಕ ಹಾಕುತ್ತಾ ತಣ್ಣಗೆ ಮನೆಯಲ್ಲಿದ್ದ ಕಿರಣ್ ಅದೊಂದು ದಿನ - 'ಬೆಳಿಗ್ಗೆದ್ದು ಪೇಪರ್ ಓದಲು ಭಯವಾಗುತ್ತದೆ. ಎಲ್ಲಿ ನೋಡಿದರೂ ಹಿಂಸೆ, ಕೋಮುಗಲಭೆ..'ಎಂದಳು. ಟೀವಿ ಸಂವಾದವೊಂದರಲ್ಲಿ ಕುಳಿತಿದ್ದ ಅಮೀರ್‌ಖಾನ್ ಅದನ್ನೇ ಲೋಕಾಭಿರಾಮವಾಗಿ ಕ್ಯಾಮೆರಾ ಮುಂದೆ ನೆನಪಿಸಿಕೊಂಡಿದ್ದ. ಈಗ ಅಮೀರ್‌ಖಾನ್ ವಿಲನ್ ಆಗಿದ್ದಾನೆ. ಬೆಂಕಿ ಹಚ್ಚುವ ಮತ್ತು ಬೆಂಕಿ ಆರಿಸುವ ಎರಡೂ ಕೆಲಸ ಭರದಿಂದ ನಡೆದಿದೆ. ಕಿರಣ್‌ರಾವ್ ಈಗ ಸೆಲೆಬ್ರಿಟಿ! ■

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65